ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/04/ಇಸಿಎಸ್(2)/2022

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದಿನಾಂಕ:23/08/2022

ಹಿಂಬರಹ

ಖಜಾನೆ ಆಯುಕ್ತರು, ಖಜಾನೆ ಆಯುಕ್ತರ ಕಾರ್ಯಾಲಯ, ಬೆಂಗಳೂರು, ಇವರ ಪತ್ರ ಸಂಖ್ಯೆ: ಖನಿ/ಪ್ರಕ್ರಿಯೆ/05/2022-23(ಇತರೆ ಪರೀಕ್ಷೆಗಳು) ದಿನಾಂಕ:17/08/2022ರ ಪ್ರತಿಯನ್ನು ಈ ಕೆಳಕಂಡವರಿಗೆ ಕಳುಹಿಸಿಕೊಡಲಾಗಿದೆ.

1) ತಾಂತ್ರಿಕ ಪರೀಕ್ಷಾ ಮಂಡಳಿಯ ವ್ಯಾಪ್ತಿಗೊಳಪಡುವ ಎಲ್ಲಾ ಸರ್ಕಾರಿ/ಅನುದಾನಿತ/ ಖಾಸಗಿ ಪಾಲಿಟೆಕ್ನಿಕ್ ಗಳ ಪ್ರಾಚಾರ್ಯರುಗಳಿಗೆ - ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ (ಇಲಾಖಾ ವೆಬ್ ಸೈಟ್ ಮುಖಾಂತರ)
2) ಆಯುಕ್ತರ ಆಪ್ತ ಶಾಖೆಗೆ
3) ನಿರ್ದೇಶಕರ ಆಪ್ತ ಶಾಖೆಗೆ
4) ಇ-ಆಡಳಿತ - ವೆಬ್ ಸೈಟ್ ನಲ್ಲಿ ಪ್ರಕಟಿಸಲು
5) ಗಣಕ ಕೇಂದ್ರ - ಬಿಟಿಇ ಲಿಂಕ್ಸ್ ನಲ್ಲಿ ಪ್ರಕಟಿಸಲು

Padmini R 23/8/22
ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ
ಬೆಂಗಳೂರು

ಕರ್ನಾಟಕ ಸರ್ಕಾರ

ಖಜಾನೆ ಇಲಾಖೆ

ಖಜಾನೆ ಆಯುಕ್ತರ ಕಾರ್ಯಾಲಯ, ಕೆ,ಪಿ,ಸಿ,ಎಲ್ ಕಟ್ಟಡ 6ನೇ ಮಹಡಿ, ಅರಮನೆ ರಸ್ತೆ, ಬೆಂಗಳೂರು-560001.

---

ಸಂ.ಖಿನಿ/ಪ್ರಕ್ರಿಯೆ/05/2022-23(ಇತರೆ ಪರೀಕ್ಷೆಗಳು) ದಿನಾಂಕ:17-08-2022.

ರಾಜ್ಯದ ಎಲ್ಲಾ ಖಜಾನೆಗಳ ಪ್ರಭಾರಾಧಿಕಾರಿಗಳಿಗೆ,

ಮಾನ್ಯರೆ,

ವಿಷಯ: ತಾಂತ್ರಿಕ ಪರೀಕ್ಷಾ ಮಂಡಳಿಯು 2022ರ ಸೆಪ್ಟೆಂಬರ್ ತಿಂಗಳಲ್ಲಿ ನಡೆಸುವ ಡಿಪ್ಲೋಮ ಪರೀಕ್ಷೆಯ ಮೊಹರಾದ ಪ್ರಶ್ನೆ ಪತ್ರಿಕೆ ಪ್ಯಾಕೆಟ್ ಗಳನ್ನು ಖಜಾನೆಗಳಲ್ಲಿ ಭದ್ರಪಡಿಸುವ ಬಗ್ಗೆ.

ಉಲ್ಲೇಖ: 1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರ ಪತ್ರ ಸಂಖ್ಯೆ:ಬಿಟಿಇ 06 ಇಪಿಎಸ್ 2022 ದಿನಾಂಕ:16-08-2022

2. ಈ ಕಾರ್ಯಾಲಯದ ಸುತ್ತೋಲೆ ಸಂ: ಖಿನಿ/ಪ್ರಕ್ರಿಯೆ/09/2016-17, ದಿನಾಂಕ: 05-05-2016,

*****

ಉಲ್ಲೇಖ (1)ರ ಪತ್ರದಲ್ಲಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರು 2022ರ ಸೆಪ್ಟೆಂಬರ್ ತಿಂಗಳಲ್ಲಿ ನಡೆಸುವ ಡಿಪ್ಲೋಮ ಪರೀಕ್ಷೆಯನ್ನು ದಿನಾಂಕ:01-09-2022 ರಿಂದ 22-09-2022ರವರೆಗೆ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ನಡೆಸಲಿದ್ದು, ಸದರಿ ಪರೀಕ್ಷೆಯ ಗೌಪ್ಯ ಲಕೋಟೆಗಳನ್ನು ಪರೀಕ್ಷಾ ಪ್ರಾಧಿಕಾರದಿಂದ ನಿಯೋಜಿಸಿರುವ ಮುಖ್ಯ ಅಧೀಕ್ಷಕರು/ಉಪ ಮುಖ್ಯ ಅಧೀಕ್ಷಕರುಗಳ ಮುಖಾಂತರ ಖಜಾನೆಗಳಲ್ಲಿ ಅಭಿರಕ್ಷೆಯಲ್ಲಿಟ್ಟುಕೊಂಡು ಪರೀಕ್ಷಾ ದಿನಾಂಕಗಳಂದು ಪರೀಕ್ಷೆ ಪ್ರಾರಂಭವಾಗುವ ಒಂದು ಗಂಟೆ ಮುಂಚಿತವಾಗಿ ಆಯಾ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ಪಡೆದುಕೊಳ್ಳಲು ಅನುವಾಗುವಂತೆ ಸಂಬಂಧಿಸಿದ ಜಿಲ್ಲಾ ಮತ್ತು ತಾಲ್ಲೂಕು ಖಜಾನಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿರುತ್ತಾರೆ.

ಸದರಿ ಪರೀಕ್ಷೆಗೆ ಸಂಬಂಧಿಸಿದ ಪರೀಕ್ಷಾ ಗೌಪ್ಯ ಸಾಮಗ್ರಿಗಳನ್ನು ಕ.ಆ.ಸಂ. ಸಂಪುಟ 2 ಪರಿಶಿಷ್ಟ 2ರ ನಿಯಮಗಳನ್ವಯ ಮತ್ತು ಕ.ಖ.ಸಂ. ಅನುಚ್ಛೇಧ 18(ಎ) ರಡಿಯಲ್ಲಿನ ಅಪವಾದ ಹಾಗೂ ಈ ಕಛೇರಿ ಸುತ್ತೋಲೆ ಸಂ:ಖಿನಿ/ಪ್ರಕ್ರಿಯೆ/154/95-96 ದಿನಾಂಕ 30-10-95ರಲ್ಲಿ ನೀಡಿರುವ ಸೂಚನೆಗಳನ್ವಯ ಪರೀಕ್ಷಾ ಪ್ರಾಧಿಕಾರ ನೇಮಿಸಿದ ಪ್ರಾಧಿಕಾರಿಗಳಿಂದ ಖಜಾನೆಗಳಲ್ಲಿ ಅಭಿರಕ್ಷೆಯಲ್ಲಿಟ್ಟುಕೊಂಡು, ಪರೀಕ್ಷಾ ದಿನದಂದು ಪರೀಕ್ಷೆ ಪ್ರಾರಂಭವಾಗುವ ಮುಂಚೆ ಕರ್ನಾಟಕ ಖಜಾನೆ ಸಂಹಿತೆಯ ಅಂಶಗಳಂತೆ ಸಮಯ ಪಾಲನೆ ಮಾಡಲು ಹಾಗೂ ಸದರಿ ವಹಿವಾಟಿನ ಸಂದರ್ಭದಲ್ಲಿ ಜೋಡಿ ಬೀಗದ ಇಬ್ಬರು ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರಲು ತಿಳಿಸಿದೆ

...2

ಜೊತೆಗೆ, ಉಲ್ಲೇಖ(2)ರಂತೆ ದಿನಾಂಕ: 05-05-2016 ರಂದು ಪರೀಕ್ಷಾ ಗೌಪ್ಯ ಸಾಮಗ್ರಿಗಳ ಅಭಿರಕ್ಷಣೆ ಕುರಿತು ಪ್ರತ್ಯೇಕ ಸುತ್ತೋಲೆ ಹೊರಡಿಸಿದ್ದು, ಸದರಿ ಸುತ್ತೋಲೆಯಲ್ಲಿ ಜೋಡಿ ಬೀಗದ ಕಾರ್ಯನಿರ್ವಹಣೆ ಹಾಗೂ ಭದ್ರತಾ ಕೊಠಡಿಯ ಪೋಲೀಸ್ ಕಾವಲು ಪಡೆ ಸಂಬಂಧ ನಿಗದಿಪಡಿಸಿದ ಕ್ರಮವನ್ನು ಅನುಸರಿಸುವುದು ಕಡ್ಡಾಯವಾಗಿರುತ್ತದೆ ಹಾಗೂ ಪರೀಕ್ಷಾ ಸಾಮಗ್ರಿಗಳನ್ನು ಪರೀಕ್ಷಾ ಕಾರ್ಯಕ್ಕೆ ನಿಯೋಜಿತರಾದ ಅಧಿಕಾರಿಗಳ ಅಧಿಕೃತ ಪತ್ರ ಧೃಡಪಡಿಸಿಕೊಂಡು ಸದರಿ ಅಧಿಕಾರಿಗಳಿಗಲ್ಲದೆ, ಇತರೆ ಅಧಿಕಾರಿಗಳಿಗೆ ವಿತರಿಸತಕ್ಕದ್ದಲ್ಲ ಹಾಗೂ ಪರೀಕ್ಷಾ ಸಾಮಗ್ರಿಗಳನ್ನು ವಿತರಿಸಿದ ನಂತರ ಪರೀಕ್ಷಾ ಸಾಮಗ್ರಿಗಳ ಗೌಪ್ಯತೆ ಹಾಗೂ ಸುರಕ್ಷತೆ ಬಗ್ಗೆ ಖಜಾನಾಧಿಕಾರಿಗಳ ಯಾವುದೇ ಜವಾಬ್ದಾರಿ ಇರುವುದಿಲ್ಲ ಎಂಬ ಅಂಶವನ್ನು ಸದರಿ ಅಧಿಕಾರಿಗಳ ಗಮನಕ್ಕೆ ತರುವುದು.

ಮೇಲ್ಕಂಡ ಸೂಚನೆಗಳನ್ನು ಪಾಲಿಸದೆ ಈ ಸಂಬಂಧ ಯಾವುದೇ ಸಮಸ್ಯೆಗಳಾಗಲಿ ಅಥವಾ ಪ್ರಕ್ರಿಯಾ ಲೋಪಗಳು ಉದ್ಭವಿಸಿದಲ್ಲಿ ಅಂತಹ ಲೋಪದೋಷಗಳಿಗೆ ಸಂಬಂಧಪಟ್ಟ ಖಜಾನೆಯ ಜೋಡಿ ಬೀಗದ ಅಧಿಕಾರಿಗಳನ್ನು ಹೊಣೆ ಮಾಡಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಈ ಮೂಲಕ ಸೂಚಿಸಿದೆ.

ತಮ್ಮ ನಂಬುಗೆಯ,

ಸಹಿ/-

ಖಜಾನೆ ಆಯುಕ್ತರು

ಬೆಂಗಳೂರು.

17/8

ಪ್ರತಿಯನ್ನು:

1. ನಿರ್ದೇಶಕರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರುರವರ ಬೆಂಗಳೂರು-560001 ಇವರಿಗೆ ಮಾಹಿತಿಗಾಗಿ
2. ಸಹಾಯಕ ನಿರ್ದೇಶಕರು, ಎನ್ ಎಂ ಸಿ ಶಾಖೆ, 5ನೇ ಮಹಡಿ, ಖಜಾನೆ ಆಯುಕ್ತಾಲಯ, ಬೆಂಗಳೂರು ಬ ಇವರಿಗೆ ಖಜಾನೆ ನೆಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ